ರೆಸ್ಟ್ರಿಕ್ಷನ್ ಏನು ಎರಡು ಸಕ್ಕರೆ ಕಾರ್ಖಾನೆಗಳ ನಡುವೆ 25 ಕಿಲೋಮಿಟರ್ ಅಂತರ ಇರಬೇಕೆಂದು ಇದೆ, ಅದರಂತೆ ಮಾಡುವುದಕ್ಕಾಗುವಿದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮೂವ್ ಮಾಡಿ 15 ಕಿಲೋ ಮೀಟರ್ ಅಂತರ ಇರುವಂತೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಅದು ಬಹಳ ಉತ್ತಮವಾದ ಸಲಹೆಯಾಗಿದ್ದು ಪರಿಶೀಲನೆ ಯೋಗ್ಯವಾಗಿದೆ. ಅದ್ದನ್ನು ಖಂಡಿತ ಪರಿಶೀಲಿಸುತ್ತೇನೆ.

(ಗೊಂದಲ)

ಹೆಚ್ಚುವರಿ ಇರತಕ್ಕ ಕಬ್ಬನ್ನು ಅರೆಯಬೇಕೆಂದರೆ ರೈತರ ಹಿತದೃಷ್ಟಿಯಿಂದ ಅದಕ್ಕೆಲ್ಲ ವ್ಯವಸ್ಥೆ ಇದೆ. ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆಗಳು ಇವೆ ಅಲ್ಲಿ ಅವು ಈಗಿನ ವ್ಯವಸ್ಥೆಯ ಪ್ರಕಾರ ಮುಂದುವರಿಯುತ್ತವೆ.

ಈಗಿರತಕ್ಕ ಪದ್ಧತಿ ಮುಂದುವರೆಯುವುದು ಅನಿವಾರ್ಯವಾಗಿದೆ ಎಂದು ಹೇಳಿದ್ದೇನೆ. ಮತ್ತೆ ದೇಶಪಾಂಡೆಯವರು ಹೇಳಿರುವುದು good suggestion for action ಎಂದು ಹೇಳಿದ್ದೇನೆ.

1990ನೇ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ವಿಧೇಯಕ ವರದಿ ಒಪ್ಪಿಸಲು ಕಾಲಾವಧಿ ವಿಸ್ತರಣೆಯ ಬಗ್ಗೆ.

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜಕಲ್ಯಾಣ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ 1990ನೇ ಸಾಲಿನ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1991 ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಹೀಗಿದೆ.

1990ನೇ ಸಾಲಿನ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1991ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು. .....

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ಮತ್ತು ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷೆಯವರೆ, ತಮ್ಮ ಅನುಮತಿಯನ್ನು ಕೋರಿ ನಾನು ಈ ಪ್ರಸ್ತಾವವನ್ನು ಮೂವ್ ಮಾಡುತ್ತಿದ್ದೇನೆ.

"That this House do proceed to elect five Members to Senate of Bangalore University as required under 21(1) of the Karnataka State Universities Act, 1976 "

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.